**UN – 510**

III SEM.  BBM -31-  NOV  DEC

**ಮೂರನೆಯ ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2015**

REPEATER **(ರಿಪೀಟರ್ಸ್) (2012-13 and Onwards)**

**ಕನ್ನಡ ಭಾಷಾ ಪತ್ರಿಕೆ – III**

**ಸಾಹಿತ್ಯ ಸಲ್ಲಾಪ – ೨ ಮತ್ತು ಸಂವಹನ ಕೌಶಲ**

ST. CLARET COLLEGE
LIBRARY

Time : 3 Hours Max. Marks : 100

## ಭಾಗ – I

### ಸಾಹಿತ್ಯ ಪಠ್ಯಗಳು

I. ಪದ್ಯದ ಭಾವಾರ್ಥ ಬರೆಯಿರಿ : **(1×5=5)**

ಪೂರ್ವಿಕರ ಮೂಢತನಕಾದಿಯೆಂಬುವುದೆಲ್ಲಿ ?
ಅಂತವೆಂಬುವುದೆಲ್ಲಿ? ಹೇಳುವುದು ಒಂದು
ಮಾಡುವುದು ಮತ್ತೊಂದು ! ಜಗದೊಡೆಯನೆಲ್ಲಿಯುಂ
ಇರುವನೆಂಬರು ಒಮ್ಮೆ! ಗುಡಿಯಲರಸುವರೊಮ್ಮೆ!
ನಿರಾಕಾರನವನೆಂದು ಸಾರುವರು ಒಮ್ಮೆ;
ಮೂರ್ತಿಗಳ ಮಾಡಿ ಆರಾಧಿಸುವರಿನ್ನೊಮ್ಮೆ!
ಒಂದು ಸಲ ಸರ್ವರೊಳು ಅವನಿರುವನೆನ್ನುವರು ;
'ಹೊಲೆಯ ನೀ ದೂರವಿರು' ಎಂದೆಂಬರಿನ್ನೊಮ್ಮೆ!
ನುಡಿಗೂ ನೆಗಳ್ತಿಗೂ ಸಂಬಂಧವೇ ಇಲ್ಲ!

II. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(3×5=15)**

1) ಬ್ರಾಹ್ಮಣರು ಹಾಗೂ ರೈತ ಶಿವನ ಗುಡಿಯಿಂದ ಏನನ್ನು ತಂದಿದ್ದರು ?
2) ದೈವದ ಬಗ್ಗೆ ಚಿನ್ನವ್ವನಿಗೆ ಇದ್ದ ನಂಬಿಕೆಯೇನು ?
3) 'ರಂಗೋಲಿ ಮತ್ತು ಮಗ ' ಕವನದಲ್ಲಿ ಬರುವ ಅಪ್ಪ, ಮಗನ ನಡುವಿನ ಸಂವಾದದ ಸ್ವಾರಸ್ಯ ಬರೆಯಿರಿ.
4) 'ಕಾಯಕ'ಕ್ಕೆ ವಚನಕಾರರು ನೀಡುವ ಮಹತ್ವವೇನು ?
5) ಜಿರಲೆಗಳಲ್ಲಿ ಎಷ್ಟು ವಿಧಗಳಿವೆ ? ಅವು ಯಾವುವು ?

P.T.O.

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ : **(3×12=36)**

1) 'ಶಿವ 'ನು ಕಾಯಕದಲ್ಲಿ ನಿಷ್ಠೆ ತೋರುವವರಿಗೆ ಮಾತ್ರ ಒಲಿಯುತ್ತಾನೆ ಎಂಬುದನ್ನು 'ಜಲಗಾರ' ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.

2) ಗ್ರಾಮೀಣ ಜೀವನವು 'ಕೋಳಿಪಾಲು' ಕತೆಯಲ್ಲಿ ಹೇಗೆ ಅನಾವರಣಗೊಂಡಿದೆ ? ವಿವರಿಸಿ.

3) ಭಾಷೆಯ ವಿವಿಧ ಕೆಲಸಗಳನ್ನು ವಿವರಿಸಿ.

4) ಜಿರಲೆಗಳನ್ನು 'ಚಿರಂಜೀವಿ ರಾಕ್ಷಸ ' ರೆಂದು ಕರೆಯಲು ಕಾರಣವೇನು ? ಲೇಖನದ ಹಿನ್ನೆಲೆಯಲ್ಲಿ ತಿಳಿಸಿ.

5) ಸಂಪ್ರದಾಯ ಮತ್ತು ವೈಚಾರಿಕತೆಯ ಹಿನ್ನೆಲೆಯಲ್ಲಿ 'ರಂಗೋಲಿ ಮತ್ತು ಮಗ' ಕವನವನ್ನು ಚರ್ಚಿಸಿ.

## ಭಾಗ – II

## ಸಂವಹನ ಕನ್ನಡ

I. ಇವುಗಳಲ್ಲಿ **ನಾಲ್ಕು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(4×5=20)**

1) ಅಶಾಬ್ದಿಕ ಸಂವಹನ

2) ವೆಬ್‌ಸೈಟ್

3) ಚಲನಚಿತ್ರ

4) ಎಜುಸ್ಯಾಟ್ (Edusat)

5) ವೃತ್ತ ಪತ್ರಿಕೆಗಳು

6) ದೂರವಾಣಿ.

II. ಇವುಗಳಲ್ಲಿ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ : **(2×12=24)**

1) ಸಂವಹನ ಎಂದರೇನು ? ಸಂವಹನ ಮತ್ತು ಭಾಷೆಯ ಸ್ವರೂಪವನ್ನು ವಿವರಿಸಿ.

2) ವಿಷಯ ಪ್ರಸ್ತುತಿ ಕಲೆ ಎಂದರೇನು ? ವಿವರಿಸಿ.

3) ಜಗತ್ತನ್ನು ಕಿರಿದುಗೊಳಿಸಿರುವ ಅಂತರ್ಜಾಲದ ವಿಶೇಷತೆಯನ್ನು ಚರ್ಚಿಸಿ.

4) ಮನರಂಜನೆ ಮತ್ತು ಮಾಹಿತಿ ಸಂವಹನಕ್ಕೆ ರೇಡಿಯೋ ನೀಡಿರುವ ಕೊಡುಗೆಯನ್ನು ವಿವರಿಸಿ.

5) ಭಾಷೆಯ ಉಗಮವನ್ನು ಕುರಿತು ನಡೆದಿರುವ ಚಿಂತನೆಗಳೇನು ? ವಿವರಿಸಿ.

---